# ಕರ್ನಾಟಕದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯ ಬಗ್ಗೆ
Karnataka's Information Technology Growth Story

## ನೀತಿಯ ಅಡಿಯಲ್ಲಿ ಪ್ರಮುಖ ಪ್ರೋತ್ಸಾಹಕಗಳು

- ರೂ 250 ಕೋಟಿಗಿಂತ ಹೆಚ್ಚಿನ ಬೃಹತ್ ಕಾರ್ಯಯೋಜನೆಗಳಿಗೆ ಆಯಾ ಉದ್ದಿಮೆಗೆ ಅನುಗುಣವಾಗಿ ಪ್ರೋತ್ಸಾಹಕಗಳನ್ನು ನೀಡುವ ಬಗ್ಗೆ ಪರಿಗಣನೆ
- ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನ ವಲಯ/ ಕ್ಲಸ್ಟರ್‌ಗಳ ಸ್ಥಾಪನೆಗೆ ರೂ. 3 ಕೋಟಿ ರೂಪಾಯಿಗಳವರೆಗೆ ಹಣಕಾಸು ನೆರವು
- ಪ್ರತಿ ಚದರ ಅಡಿಗೆ ರೂ 10 ರ ದರದಲ್ಲಿ ಗರಿಷ್ಟ ರೂ 3 ಲಕ್ಷದವರೆಗೆ ಗುತ್ತಿಗೆ/ಬಾಡಿಗೆ ಮರುಪಾವತಿ ಮತ್ತು ಒಂದು ಸೀಟಿಗೆ ರೂ 1000/- ರಂತೆ, ಒಟ್ಟಾರೆ ಗರಿಷ್ಠ ರೂ 6 ಲಕ್ಷಗಳ ಮೊತ್ತದವರೆಗೆ, 1 ವರ್ಷ ಅವಧಿಗೆ ಗುತ್ತಿಗೆ/ಬಾಡಿಗೆ ಮರುಪಾವತಿ.
- ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಸಂಘಟನಾ ಕಾರ್ಯಸ್ಥಾನಗಳು (ಕೋ ವರ್ಕಿಂಗ್ ಸ್ಪೇಸಸ್) ಬಳಕೆಗೆ ಸಂಪೂರ್ಣ ಸನ್ನದ್ಧಗೊಂಡ (ಪ್ಲಗ್ ಅಂಡ್ ಪ್ಲೇ) ಮೂಲಸೌಕರ್ಯಗಳಿಗಾಗಿ ರೂ 2 ಕೋಟಿ ರೂಪಾಯಿಗಳವರೆಗೆ ಹಣಕಾಸು ನೆರವು.
- ಮೈಸೂರು, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ಶೇಕಡ 75ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ, ವಲಯ 3 ಹೊರತುಪಡಿಸಿ ಬೇರೆಲ್ಲಾ ವಲಯಗಳಲ್ಲಿ ಶೇಕಡ 100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ.
- ಹೊರಹೊಮ್ಮುತ್ತಿರುವ ತಾಂತ್ರಿಕತೆಗಳ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ (ಆರ್ &ಡಿ) ರೂ 1 ಕೋಟಿಯವರೆಗೆ ಅಥವಾ 33 % ವರೆಗೆ ಸಂಶೋಧನಾ ಮತ್ತು ಅಭಿವೃದ್ಧಿ ನೆರವು